ಇಲ್ಲಿನ ವಾಸದಿಂದ ವೇದ್ಯವಾಗಿದೆ. ದಿನಪತ್ರಿಕೆ ಬರಲಿಲ್ಲವೆಂದು ಮೇಲಿನಿಂದ ನಾವು ಎಷ್ಟು ಬೊಬ್ಬಿಟ್ಟು ಕರೆದರೂ, ಕೆಳಗಿರುವ ಪೇಪರ್‌ನವನಿಗೆ ನಮ್ಮ ದನಿ ತಲುಪದು. ಅದೇ ದೂರ ಹಿಂದುಗಡೆಯಿರುವ ಇನ್ನೊಂದು ಕಟ್ಟಡದವರು, 'ಪೇಪರ್‌ವಾಲಾ! ಚಾಯ್‌ವಾಲಾ' ಎಂದು ಕರೆದರೆ ಆ ಸ್ವರ ಸಲೀಸಾಗಿ ಅವರನ್ನು ತಲುಪುತ್ತದೆ! ಹೌದು, ಹೇಳಲು ಮರೆತೆ; ಗುಜರಾತಿಗಳೇ ವಾಸವಾಗಿರುವ ಇಲ್ಲಿನ ವಸತಿ ಸಮುಚ್ಚಯಗಳಲ್ಲಿ ನಾವೊಂದು ಮನೆಯವರು ಮಾತ್ರ ಅನ್ಯರು. ಕನ್ನಡದವರಾದರೂ ಅವರ ತಿಳಿವಿನಲ್ಲಿ 'ಮದರಾಸಿಗಳು'! ನೀವೆಷ್ಟೇ ತಿದ್ದಿರಿ, ಭೂಪಟ ಬಿಡಿಸಿಟ್ಟು ಕಲಿಸಿರಿ, ಕೊನೆಗೂ ನೀವವರ ಪಾಲಿಗೆ ಮದರಾಸಿಗಳಾಗಿಯೇ ಉಳಿವವರು!

ಅಸಲ್ಫಾದ ಗುಡ್ಡ ಕುಸಿತದಲ್ಲಿ, ಮಾಹುಲ್‌ನ ರಿಫೈನರಿ ಸ್ಫೋಟದಲ್ಲಿ, ಘಾಟ್‌ಕೋಪರ್ ಪಶ್ಚಿಮದಲ್ಲಿ ಸಂಭವಿಸಿದ ವಿಮಾನ ಪತನದಲ್ಲಿ, ಹಳೆ ಕಟ್ಟಡ ಧರೆಗುರುಳಿದ ಸಂದರ್ಭದಲ್ಲಿ, ಗೋವಿಂದದ ದಹಿಹಂಡಿ ವಿಕ್ರಮಗಳಲ್ಲಿ ಮತ್ತು ನಗರದಲ್ಲಿ ನಡೆವ ಇತರ ಅಪಘಾತಗಳಲ್ಲಿ, ಅನಾರೋಗ್ಯದ ವಿಷಮ ಸ್ಥಿತಿಯಲ್ಲಿ, ಹೀಗೆಲ್ಲ ರಾಜವಾಡಿ ಆಸ್ಪತ್ರೆಯತ್ತ ನಮ್ಮೆದುರಿನಿಂದ ಸಾಗಿ ಹೋಗುವ ಆಂಬ್ಯುಲೆನ್ಸ್‌ಗಳ ತುರ್ತು ಕರೆಗಳಿಗೆ ಇಲ್ಲಿ ರಸ್ತೆ ತೆರವಾಗುವುದಾದರೂ ಎಂತು? ರಸ್ತೆ ತುಂಬಿ ಫುಟ್‌ಪಾತ್ ಮೇಲೂ ಸಂಚರಿಸುವ ವಾಹನಗಳಿಂದಾಗಿ ದಾರಿಹೋಕರಿಗೆ ಸಲೀಸಾಗಿ ನಡೆಯಲು ಸ್ಥಳವೇ ಇಲ್ಲ! ಎಷ್ಟೇ ವಾಹನದಟ್ಟಣೆಯಿರಲಿ, ರಸ್ತೆ ದಾಟುವುದರಲ್ಲಿ ಇಲ್ಲಿನ ಮಹಿಳೆಯರು, ಮುದುಕಿಯರು ನಿಸ್ಸೀಮರು! ತಾವೇ ನಿಯಂತ್ರಕರಾಗಿ ವಾಹನಗಳಿಗೆ ಕ್ಯಾರೇ ಅನ್ನದೆ, ನಿಲ್ಲುವಂತೆ ಕೈತೋರುತ್ತಾ ನೇರ ದಾಟಿ ಬಿಡುವ ಇವರ ಬಗ್ಗೆ ವಾಹನಗಳೇ ಜಾಗ್ರತೆ ವಹಿಸ ಬೇಕಲ್ಲದೆ, ಅವರಿಗ್ಯಾವ ಪರಿವೆಯೂ ಇಲ್ಲ.

ಮಾಹುಲ್‌ನ ರಿಫೈನರಿ ಸ್ಫೋಟ ಸಂಭವಿಸಿದಾಗ, ವಿಸ್ಫೋಟದ ಸದ್ದು ನಾಲ್ಕು ಉಪನಗರಗಳೀಚೆ ಇಷ್ಟು ದೂರಕ್ಕೆ ನಮಗೂ ಸ್ಪಷ್ಟವಾಗಿ ಕೇಳಿಸಿ ನಡುಗಿಸಿತ್ತು. ಪಕ್ಕದಲ್ಲೇ ಯಾವುದೋ ಕಟ್ಟಡ ಧರೆಗುರುಳಿತೇನೋ ಎಂದು ನಾವಂದುಕೊಂಡಿದ್ದೆವು! ನಮ್ಮ ಮನೆಗೆಲಸದ ಸಹಾಯಕಿ ಮಾಯಾ, ತನ್ನ ತಂಗಿಯ ಮನೆಗೆ ಮಾಹುಲ್‌ಗೆ ಹೋದಂದೇ ಅಲ್ಲಿ ಆ ಆಸ್ಫೋಟ ಘಟಿಸಿ, ಮಾಹುಲ್ ನಿವಾಸಿಗಳಂತೆಯೇ, ನಮ್ಮ ಮಾಯಾ ಕೂಡಾ ವರ್ಷಪೂರ್ತಿ ಚರ್ಮಬಾಧೆಗೊಳಗಾಗಿದ್ದಳು. 'ಹಮ್‌ಲೋಗ್ ಬಾಲ್ಕನೀ ಮೇ ಖಡೇ ಥೇ, ಅಮ್ಮಾ, ಔರ್ ಅಪ್‌ನೇ ಆಂಖೋಂ ಕೇ ಸಾಮ್ನೇ ಹೀ...' ಎನ್ನುತ್ತಾ ನಡುಗುತ್ತಿದ್ದಳು, ಮಾಯಾ. ಕೆಲವೇ ದಿನಗಳಲ್ಲಿ ಮಾಯಾ ಕರಪರ ಮೈ ಕೆರೆದು ಕೊಳ್ಳಲಾರಂಭಿಸಿದಳು. ಮೂವರು ಚರ್ಮತಜ್ಞರ ತಪಾಸಣೆ, ಚಿಕಿತ್ಸೆ ಎಲ್ಲಾ ನಡೆದು, ಕೊನೆಗೂ ಹವೆ ಬದಲಾವಣೆ ಹಾಗೂ ವಿಶ್ರಾಂತಿಗಾಗಿ ಮಹಾಡ್‌ನ ಸ್ವಚ್ಛಪರಿಸರದಲ್ಲಿನ ತನ್ನ ಮಗಳ ಮನೆಗೆ ಹೋದಳು. ಅಲ್ಲಿನ ಚರ್ಮತಜ್ಞರಿಂದಲೂ ಚಿಕಿತ್ಸೆ ನಡೆಯಿತು. ಎರಡು ತಿಂಗಳ ಬಳಿಕ ಹಿಂದಿರುಗಿದ ಮಾಯಾ, ಮಗಳ ಮನೆಯ ಆಪೂಸ್ ಮಾವು, ಚಿಕ್ಕೂ, ಲಿಂಬೂ ಹಣ್ಣುಗಳ ಸಮೃದ್ಧಿ, ಮನೆಯ ಹಿಂದಿನ ಹೊಳೆ, ದಬ್‌ದಬೆಯ ಸೌಂದರ್ಯದ ಬಗ್ಗೆ ವರ್ಣಿಸುವಾಗ ಟಿ.ವಿ. ನ್ಯೂಸ್ ಚಾನೆಲ್, ಮಾಹುಲ್ ವಾಸಿಗಳ ಮುಗಿಯದ ಗೋಳನ್ನೇ ಪ್ರಸ್ತುತ ಪಡಿಸುತ್ತಿತ್ತು; ಅವರ ಪರಿಸ್ಥಿತಿ, ಪರಿಹಾರದ ಬಗ್ಗೆ ಪರಿಣತರ ಬಿಸಿ ಬಿಸಿ ಚರ್ಚೆ ನಡೆದಿತ್ತು.

ರಾಜವಾಡಿಯ ಅತ್ತಕಡೆ ಸ್ಲಮ್‌ನಲ್ಲಿದ್ದ ಮಾಯಾಳ ಬಳಗದ ವಸತಿ ಸಂಕೀರ್ಣ, ಚಾಳ್‌ಗಳಾಗಿ, ಮತ್ತೆ ಏಳು ಮಹಡಿಯ ವಸತಿ ಕಟ್ಟಡವಾಗಿ, ಮತ್ತೀಗ ರಾಜವಾಡಿ ಆಸ್ಪತ್ರೆಯ ನೂತನ ಕಟ್ಟಡಕ್ಕಾಗಿ ಪುನಃ ಕೆಡವಲ್ಪಡುವುದರಲ್ಲಿದೆ.

**ಶತಮಾನಕ್ಕೂ ಹಿಂದೆ ಮಂಗಳೂರು ಕರಾವಳಿಯಿಂದ ಮಂಜು ಹತ್ತಿ ಅದೆಷ್ಟೋ ದಿನ ಸಮುದ್ರಯಾನ ಮಾಡಿ ಮುಂಬೈ ಸೇರಿದವರಿದ್ದರು. ಮತ್ತೆ ಹಡಗುಗಳನೇರಿ ಮೂರು ದಿನ ಕಡಲ ಹಾದು ಮುಂಬೈ ಧಕ್ಕೆಯಲ್ಲಿಳಿದು ಬದುಕು ಕಟ್ಟಿಕೊಂಡವರಿದ್ದರು. ನಮ್ಮ ಬಾಲ್ಯದಲ್ಲಿ ಬಂಧುಗಳೆಲ್ಲ ಹಡಗೇರಿ ಮುಂಬೈಗೆ ಹೊರಡುವಾಗ, ನಮಗೂ ಆ ಕಡಲಯಾನದ ಭಾಗ್ಯ ದೊರಕಲೆಂದು ಆಶಿಸಿದ್ದೆಷ್ಟೋ! ಆದರೆ ಬದುಕು ಮುಂಬೈಯತ್ತ ತೆರೆದುಕೊಂಡಾಗ ಈ ಹಡಗುಗಳೇ ಮಾಯವಾಗಿ ಬಿಟ್ಟಿದ್ದುವಲ್ಲ!**

ಬದಲಿ ವಸತಿ ಒದಗಿಸಲಾಗುವ ಸಮಾಧಾನ ನಿವಾಸಿಗಳದು. ಗಣಪತಿ, ದಸರಾ, ದಿವಾಳಿ ಎಂದು ಸಂಭ್ರಮಿಸುತ್ತಿದ್ದ ಮಾಯಾ, ಅಂಬೇಡ್ಕರ್ ಜಯಂತಿಯಂದು ಭಕ್ತಿ, ಶ್ರದ್ಧೆಯಿಂದ ಚೈತ್ಯಭೂಮಿಗೂ ಹೋಗಿ ಬರುತ್ತಿದ್ದಳು. ಮತ್ತೆ, 'ಈಸೂ ಕಾ ಪ್ರಾರ್ಥನಾ ಮೇ ಜಾನಾ ಹೆ', ಎನ್ನ ತೊಡಗಿದಳು. ಮಗಳು ರೂಪಾಲಿಯ ಸಂಪಾದನೆಯಲ್ಲಿ ಅವಳಿಗೊಂದು ಚಿನ್ನದ ಸರ ತೆಗೆದುಕೊಂಡೆ, ಎಂದು ಶಿಲುಬೆಯ ಪದಕವಿದ್ದ ಸರವನ್ನು ತೋರಿದಾಗ ಕೌತುಕವೆನಿಸಿತು. ಮತ್ತೊಂದು ದಿನ ತಡವಾಗಿ ಬಂದಾಗ, ಟಿಟ್ವಾಲಾಗೆ ಮಂದಿರಕ್ಕೆ ಹೋಗಿದ್ದೆನೆಂದಳು! ಮತ, ಧರ್ಮ, ಜಾತಿ, ವಿಜಾತಿ ಎಂದು ಜನರ ಮನದಲ್ಲಿ ವಿಷಬೀಜ ಬಿತ್ತಿ ನಾಡನ್ನು ನರಕವಾಗಿಸುವವರು ನಮ್ಮ ಮಾಯಾಳಂತಿರ ಬಾರದೇ ಎಂದನಿಸುತ್ತದೆ.

ನಮ್ಮೂರಲ್ಲಿ ಉಚ್ಚಿಲ ದರ್ಗಾದ ಉರೂಸ್ ನೋಡಲು ನಾನು ನಮ್ಮ ನೆರೆಯ ಲತೀಫ್‌ನೊಡನೆ ಹೋಗಿದ್ದೆ. ಆಕರ್ಷಕ ಪ್ರವಚನಕ್ಕೆ ಕಿವಿಯಾಗಿದ್ದೆ. ಹೊಸದಾಗಿ ನಮ್ಮ ನೆರೆಗೆ ಬಂದು ಅಂದದ ಮನೆ ಕಟ್ಟಿ, ಅಂಗಡಿಯನ್ನೂ ನಿಲಿಸಿದ್ದ ಲತೀಫ್, ಆ ಮನೆ ಕಟ್ಟುವಾಗ, ಲಾರಿ ಒಳ ಬರಲೆಂದು ರಸ್ತೆಯ ಮರದ ಗೆಲ್ಲು ಕಡಿಸಿದಾಗ, 'ಯಾರೊಡನೆ ಕೇಳಿ ಕಡಿಸುತ್ತಿದ್ದೀರಿ? ಅನುಮತಿ ಪಡೆದಿರುವಿರಾ?' ಎಂದು ನಾನು ಗದರಿದ್ದೆ. ನಗುತ್ತಾ ಹೌದೆಂದ ಲತೀಫ್, ಲಾರಿಗೆ ತಾಗದಂತೆ ಚಿಕ್ಕ ಗೆಲ್ಲಷ್ಟೇ ಕಡಿಸಿದುದಾಗಿ ನಮ್ರನಾಗಿ ಉತ್ತರಿಸಿದ್ದ. ಒಂದಿನ ನಮ್ಮ ಬಸಳೆ ಪದಾರ್ಥಕ್ಕೆಂದು, ಹುಲುಸಾಗಿ ಕಾಣಿಸುತ್ತಿದ್ದ ಅವನ ಪಪಾಯಿ ಗಿಡದ ಕಾಯಿ ಬೇಕೆಂದು ಕೇಳಲು ಹೋದಾಗ, ಬೇಕಷ್ಟು ಕೊಂಡುಹೋಗಿ, ಎಂದ ಲತೀಫ್, ಕಾಯಿಗೆ ಹಣ ತೆಗೆದುಕೊಳ್ಳುವಂತೆ ಮಾಡುವಲ್ಲಿ ನಾನು ಸಫಲಳಾಗಲೇ ಇಲ್ಲ. 'ನಾನೇನು ನೆಟ್ಟದ್ದಲ್ಲ; ದೇವರು ಕೊಟ್ಟದ್ದು; ಎಲ್ಲಿಂದಲೋ ಹಕ್ಕಿ ತಂದು ಹಾಕಿದ್ದು', ಎಂದು ಬಿಟ್ಟ! ಲತೀಫ್ ಕುಟುಂಬ ಅಲ್ಲಿರುವವರೆಗೆ ನಮಗೆ ಯಾವ ಚಿಂತೆಯೂ ಇರಲಿಲ್ಲ. ನಮ್ಮ ಪಾತಾಳ ಬಾವಿ ಬೇಸಿಗೆಯಲ್ಲಿ ಬತ್ತಿದಾಗ, ಲತೀಫ್, ತನ್ನ ಬಾವಿಯಿಂದ ನಮಗೆ ನೀರಿನ ಕನೆಕ್ಷನ್ ಕೊಡುತ್ತಿದ್ದ. ಮನೆಯಲ್ಲಿ ನಮ್ಮ ಪ್ರಾಯದ ಅಮ್ಮ ಒಬ್ಬರೇ ಇದ್ದರೆ, ಬಂದು ನೋಡಿ ಕಾಳಜಿ ವಹಿಸುತ್ತಿದ್ದ. ಈದ್, ರಮ್‌ಜಾನ್‌ಗಳಲ್ಲಿ ಲತೀಫ್‌ನ ಮನೆಯ ರಸದೌತಣ ನಮ್ಮ ಮನೆ ಸೇರುತ್ತಿತ್ತು. ಈಗಲೂ ಅಷ್ಟೇ; ಆದರೆ ದೂರದಿಂದ. ನಮ್ಮೆದುರಿನ ಹೆದ್ದಾರಿ ಚತುಷ್ಪಥವಾಗಿ ಬದಲಾದಾಗ, ನಮ್ಮ ಅರ್ಧ ಹಿತ್ತಲಿನಂತೇ, ಪಕ್ಕದಲ್ಲಿ ಲತೀಫ್ ಹೊಸದಾಗಿ ಕಟ್ಟಿಸಿದ ಆ ಚೆಲುವಾದ ಮನೆ, ಅಂಗಡಿಯನ್ನೂ ಅದು ಕಬಳಿಸಿ ಬಿಟ್ಟಿತು. ದೊರಕಿದ ಪರಿಹಾರದಿಂದ ಅರ್ಧ ಮೈಲು ದೂರದಲ್ಲಿ ಗದ್ದೆ, ಜವುಗು ಪ್ರದೇಶದ ನಡುವೆ ಪುನಃ ಅಂತೆಯೇ ಚೆಲುವಾದ ಮನೆ, ಬಾವಿ ಕಟ್ಟಿಕೊಂಡಿರುವ ಲತೀಫ್ ಕುಟುಂಬ ಈಗಲೂ ನಮ್ಮಿಂದ ದೂರಾಗಿಲ್ಲ.

ಎರಡು ಸಾವಿರ ರೂಪಾಯಿಗಳಿಗೆ ಕೊಡುವ ಮಾತಾಗಿದ್ದ ಭೂಮಿಯ ತುಂಡೊಂದನ್ನು ಹತ್ತು ಸಾವಿರಕ್ಕೆ ತಮಗೆ ಮಾರುವಂತೆ ಬೇರೊಬ್ಬರು ಆಮಿಷವೊಡ್ಡಿದಾಗ, 'ನನ್ನ ನಾಲಗೆಯೇನು, ಎಕ್ಕಡದ ತುಂಡೇ?' ಎಂದು ಖಡಾಖಂಡಿತ ನಿರಾಕರಿಸಿದ್ದ ಮುಸ್ಲಿಮ್ ಸದ್ಗೃಹಸ್ಥರೊಬ್ಬರ ಬಗ್ಗೆ ಪಾಟೀಲ ಪುಟ್ಟಪ್ಪನವರೊಮ್ಮೆ ಬರೆದಿದ್ದರು. ಇಂತಹ ಸಜ್ಜನರನೇಕರು ಉಸಿರಾಡಿದ, ಬಾಳಿ ಬೆಳಗಿದ ನಾಡು ನಮ್ಮದು.

'ಸರ್ವಜನಾಂಗದ ಶಾಂತಿಯ ತೋಟ'ವಾಗಿದ್ದ ಈ ನಾಡನ್ನು ಭೇದಭಾವ, ದಬ್ಬಾಳಿಕೆ, ವೈಷಮ್ಯದ ಹಾಲಾಹಲ ಕಮರಿಸುತ್ತಿರುವ ದಿನಗಳಿವು. 'ಹಿಂದೂ ಮುಸ್ಲಿಮ್ ಕ್ರೈಸ್ತರೆಲ್ಲರಿಗೊಂದೆ ಭಾರತ ಮಂದಿರ', ಎಂಬ ಆ ಶಾಂತಿಮಂತ್ರದ ಉದ್ಘೋಷ ಪ್ರತಿ ಕೊರಳಿನಿಂದಲೂ ಹೊಮ್ಮುವ, ಪ್ರತಿ ಹೃದಯದಲ್ಲೂ ಅನುರಣಿಸುವ ಸುದಿನಗಳು ಬರದೇ ಹೋದಾವೇ? ಹರಿವ ನೀರು ಕೊಳೆಯನ್ನೆಲ್ಲ ಕಳೆವಂತೆ ಸುವಿಚಾರ ಜಲದೊಸರು ಉಕ್ಕಿ ಬರದೇ?